ನ72-129

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡ ಇವರ ನಿಯಮ 72ರ ಸೂಚನೆ **"ಬೆಂಗಳೂರಿನ ಸರ್ಕಾರಿ ವಸತಿಯುತ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ನಿವೃತ್ತಿ ಹೊಂದಿರುವ ಶಿಕ್ಷಕರುಗಳಿಗೆ ಪಿಂಚಣಿ ನೀಡುವ ಸಂಬಂಧ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಇಲಾಖಾ ಸಚಿವರು ಸದನದಲ್ಲಿ ಆಶ್ವಾಸನೆ ನೀಡಲಾಗಿದ್ದರೂ ಸಹ ಕಳೆದ 5 ವರ್ಷಗಳಿಂದ ವಯೋನಿವೃತ್ತಿ ಹೊಂದಿ ಜೀವನಾಂಶವಿಲ್ಲದೆ ತೊಂದರೆಯಲ್ಲಿರುವ ಈ ಶಿಕ್ಷಕರಿಗೆ ಪಿಂಚಣಿ ನೀಡುವ ಬಗ್ಗೆ" ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರ ಉತ್ತರ:**

1982ರ ರಾಜ್ಯ ಅನುದಾನ ಸಂಹಿತೆಯಡಿ ಒಟ್ಟು 35 ಶಾಲೆಗಳು ಅನುದಾನ ಪಡೆಯುತ್ತಿದ್ದು, ಈ ಪೈಕಿ 28 ಶಾಲೆಗಳಲ್ಲಿನ ಹುದ್ದೆಗಳು ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡಿರುವುದಿಲ್ಲ. ಈ 28 ಶಾಲೆಗಳ ಪೈಕಿ ಬೆಂಗಳೂರಿನ ಇಂದಿರಾ ನಗರದಲ್ಲಿ ನಡೆಯುತ್ತಿದ್ದ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯು ಒಂದಾಗಿದೆ. 2009ರಿಂದೀಚೆಗೆ ಈ ಯೋಜನೆಯಡಿ ಅನುದಾನಕ್ಕೆ ಸೇರ್ಪಡೆಯಾಗಿರುವ 7 ವಿಶೇಷ ಶಾಲೆಗಳಿಗೆ ಮಾತ್ರ ಹುದ್ದೆಗಳು ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡು ನಿಯಮಾನುಸಾರ ಮೀಸಲಾತಿ ಅನ್ವಯಿಸಿ ಹುದ್ದೆಗಳನ್ನು ಭರ್ತಿ ಮಾಡಿದ್ದು ಅದರಂತೆ ಕಾರ್ಯ ನಿರ್ವಹಿಸುತ್ತಿವೆ. ಆದರೆ 28 ಶಾಲೆಗಳ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಹುದ್ದೆಗಳು ಆರ್ಥಿಕ ಇಲಾಖೆಯಿಂದ ಅನುಮೋದನೆಯಾಗಿರುವುದಿಲ್ಲ ಹಾಗೂ ಮೀಸಲಾತಿ ಅನ್ವಯಿಸಿ ಸಂಸ್ಥೆಯವರು ಹುದ್ದೆಗಳನ್ನು ಭರ್ತಿ ಮಾಡಿಕೊಂಡಿರುವುದಿಲ್ಲ.

ಸರ್ಕಾರವು ಮುಖ್ಯವಾಗಿ ಸದರಿ ಸಂಸ್ಥೆಯಲ್ಲಿ ಕಿವುಡ ಮತ್ತು ಮೂಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಅವರಿಗೆ ಶಿಕ್ಷಣವನ್ನು ಮುಂದುವರೆಸಬೇಕೆಂಬ ಅಂಶವನ್ನು ಮನಗಂಡು ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರವು ವಹಿಸಿಕೊಳ್ಳಲು ಇರುವ ಎಲ್ಲಾ ನಿಯಮಗಳನ್ನು ಪಾಲಿಸಿಯೇ ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಸಿಬ್ಬಂದಿ ಸಮೇತ, ಚರ, ಸ್ಥಿರ ಆಸ್ತಿ ಒಳಗೊಂಡಂತೆ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ನಿಯಮಾನುಸಾರ ಮಾರ್ಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಮಮಇ 389 ಪಿಹೆಚ್‌ಪಿ 2014, ದಿನಾಂಕ:23.07.2016ರಲ್ಲಿ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆ, ಬೆಂಗಳೂರು ಸಂಸ್ಥೆಯ ಸಿಬ್ಬಂದಿಗಳಿಗೆ ಪಿಂಚಣಿ ಸೌಲಭ್ಯ ಒದಗಿಸುವ ಕುರಿತಂತೆ ಆರ್ಥಿಕ ಇಲಾಖೆಯು ದಿ:17.07.2019ರಂದು ನೀಡಲಾಗಿರುವ ಅಭಿಪ್ರಾಯದಂತೆ ಇಲ್ಲಿನ ಸಿಬ್ಬಂದಿ ವರ್ಗದವರನ್ನು ಸಿವಿಲ್ ಸೇವಾ ವ್ಯಾಪ್ತಿಗೊಳಪಡಿಸಿ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವಲ್ಲಿ ವಿಶೇಷ ವಿಲೀನಾತಿ ನಿಯಮಗಳನ್ನು ರಚಿಸಿ ಅಧಿಸೂಚಿಸಬೇಕೆಂದು ಹಾಗೂ ಈ ಸಂಸ್ಥೆಯ ನೌಕರರು ಅನುದಾನಿತ ಶಾಲಾ ಸಿಬ್ಬಂದಿ ವ್ಯಾಪ್ತಿಗೊಳಪಟ್ಟು ಟಿ.ಬಿ.ಎಸ್. ನಿಯಮಗಳನ್ವಯದ ಪಿಂಚಣಿ ಸೌಲಭ್ಯಗಳಿಗೆ ಅರ್ಹರಾಗತಕ್ಕದ್ದೆಂದು ತಿಳಿಸುವುದರೊಂದಿಗೆ ದಿ:01.04.2006ರ ನಂತರದ ಪ್ರಕರಣಗಳಲ್ಲಿ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಯ ಪರಿಗಣನೆಗೆ ಅವಕಾಶವಿಲ್ಲವಾದ್ದರಿಂದ "Appointed day" ದಿನಾಂಕದಿಂದ ಅನ್ವಯಿಸಿ ಈ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿ ನಿಯತಗೊಳಿಸತಕ್ಕದ್ದೆಂದು ಆರ್ಥಿಕ ಇಲಾಖೆಯು ನೀಡಿರುವ ಸ್ಪಷ್ಟ ಅಭಿಪ್ರಾಯದ ಹಿನ್ನೆಲೆಯಲ್ಲಿ ಅದರಂತೆ ಕ್ರಮವಹಿಸಲು ಪರಿಶೀಲಿಸಲಾಗುತ್ತಿದೆ.

**ಸಂಖ್ಯೆ: ಮಮಇ 86 ಪಿಹೆಚ್‌ಪಿ 2020**

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರಿಕರ ಸಬಲೀಕರಣ ಇಲಾಖಾ
ಸಚಿವರು